Office of the Deputy Director
Village Industries, Industries Department
Zilla Panchayat, Naubad, Bidar
Phone No. 08482-233143

ಜಿಲ್ಲಾ ಪಂಚಾಯತ ಬೀದರ

ಉಪನಿರ್ದೇಶಕರವರ ಕಛೇರಿ
ಗ್ರಾಮೀಣ ಕೈಗಾರಿಕೆ, ಕೈಗಾರಿಕೆ ವಿಭಾಗ,
ಜಿಲ್ಲಾ ಪಂಚಾಯತ ನೌಬಾದ, ಬೀದರ
ಇ-ಮೇಲ್: ddkvizp401@gmail.com

ಸಂ: ಜಿಪಂಬೀ/ಖಾಗ್ರಾಕೈ/ಆನ್‌ಲೈನ್‌ಅರ್ಜಿ/2026–27 ದಿನಾಂಕ: 11–09–2026

## ಅಧಿಸೂಚನೆ

2026–27ನೇ ಸಾಲಿನ ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತ ಸಲಕರಣೆಗಳ ಸರಬರಾಜು ಯೋಜನೆಯಡಿ ವಿದ್ಯುತ್ ಚಾಲಿತ ಹೊಲಿಗೆ ಯಂತ್ರ ವಿತರಣೆಗಾಗಿ ಗ್ರಾಮೀಣ ಮಹಿಳಾ ಅಭ್ಯರ್ಥಿಗಳಿಂದ ದಿನಾಂಕ:–16–09–2026 ರಿಂದ ದಿನಾಂಕ:–09–10–2026ರವರೆಗೆ ವೆಬ್‌ಸೈಟ್ https://bidar.nic.in ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ಅರ್ಹತೆಗಳು :**

1) ವಿದ್ಯುತ್ ಚಾಲಿತ ಹೊಲಿಗೆ ಯಂತ್ರ ಪಡೆಯುವುದಕ್ಕಾಗಿ ಬೀದರ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ವಾಸವಿರುವ ಮಹಿಳಾ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.
2) ಅರ್ಜಿ ಸಲ್ಲಿಸುವ ಅಭ್ಯರ್ಥಿಯ ವಯಸ್ಸು: ಕನಿಷ್ಠ 18 ವರ್ಷ ಹಾಗೂ ಗರಿಷ್ಠ 45 ವರ್ಷಗಳು (ಅರ್ಜಿ ಸಲ್ಲಿಸುವ ಪ್ರಾರಂಭದ ದಿನಾಂಕವಾದ: 16–09–2026 ರಂದು).
3) ಅರ್ಜಿದಾರರು ಕನಿಷ್ಠ 10ನೇ ತರಗತಿ ಉತ್ತೀರ್ಣರಾಗಿರಬೇಕು.
4) ಈಗಾಗಲೇ ಸರ್ಕಾರದ ಯಾವುದೇ ಯೋಜನೆಯಡಿ ಹೊಲಿಗೆ ಯಂತ್ರಗಳನ್ನು ಪಡೆದಿರುವ ಫಲಾನುಭವಿಗಳು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
5) ಸರ್ಕಾರಿ ನೌಕರರು ಮತ್ತು ಅವರ ಅವಲಂಬಿತರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
6) ಒಂದು ಕುಟುಂಬದಲ್ಲಿ ಒಬ್ಬರು ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.
7) ಅರ್ಜಿ ಸಲ್ಲಿಸುವಾಗ ಆಯಾ ತಾಲ್ಲೂಕಿನ ಅರ್ಜಿದಾರರು ಆಯಾ ತಾಲ್ಲೂಕಿನಲ್ಲಿಯೇ ಅರ್ಜಿ ಸಲ್ಲಿಸಬೇಕು. ಇಲ್ಲವಾದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು.
8) ಅರ್ಜಿ ಸಲ್ಲಿಸುವಾಗ ಅಪಲೋಡ್ ಮಾಡಿದ ದಾಖಲಾತಿಗಳು ಸ್ಪಷ್ಟವಾಗಿರಬೇಕು, ಇಲ್ಲವಾದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು.
9) ಆನ್‌ಲೈನ್‌ನಲ್ಲಿ https://bidar.nic.in ವೆಬ್‌ಸೈಟ್ ಮುಖಾಂತರ ಅರ್ಜಿ ಭರ್ತಿ ಮಾಡಿ ಮತ್ತು ಸಂಬಂಧಿಸಿದ ದಾಖಲೆಗಳ ಸ್ವಯಂ ಧೃಢೀಕೃತ ಪ್ರತಿಗಳು ಅಪ್ಲೋಡ್ ಮಾಡುವ ಮೂಲಕ ನಿಗದಿತ ದಿನಾಂಕದೊಳಗಾಗಿ ಅರ್ಜಿ ಸಲ್ಲಿಸುವುದು.

**ಅಪ್ಲೋಡ್ ಮಾಡಬೇಕಾದ ದಾಖಲೆಗಳು (ಸ್ವಯಂ ಧೃಢೀಕೃತ ಪ್ರತಿಗಳು) :**

1) ಪಾಸ್‌ಪೋರ್ಟ್ ಗಾತ್ರದ ಭಾವಚಿತ್ರ (in JPG format).
2) ಜನ್ಮ ದಿನಾಂಕ ನಮೂದಿಸಿರುವ ದಾಖಲೆ (ಎಸ್.ಎಸ್.ಎಲ್.ಸಿ ಅಂಕಪಟ್ಟಿ / ವರ್ಗಾವಣೆ ಪ್ರಮಾಣ ಪತ್ರ / ಜನ್ಮ ದಿನಾಂಕ ಪ್ರಮಾಣ ಪತ್ರ / ಇನ್ನಿತರೆ ಪ್ರಮಾಣ ಪತ್ರ) (in PDF format).
3) ಆಯಾ ಗ್ರಾಮ ಪಂಚಾಯತಿಯ, ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರಿಂದ ಹೊಲಿಗೆ (ಟೇಲರಿಂಗ್) ವೃತ್ತಿ ಮಾಡುತ್ತಿರುವ ಬಗ್ಗೆ ಧೃಢೀಕರಣ ಪ್ರಮಾಣ ಪತ್ರ.
4) ಶೈಕ್ಷಣಿಕ ಅರ್ಹತೆ (ಅಂಕಪಟ್ಟಿ / ವರ್ಗಾವಣೆ ಪ್ರಮಾಣ ಪತ್ರ) (in PDF format).
5) ಪಡಿತರ ಚೀಟಿ (in PDF format).
6) ಜಾತಿ ಪ್ರಮಾಣ ಪತ್ರ (in PDF format).
7) ಆದಾಯ ಪ್ರಮಾಣ ಪತ್ರ (in PDF format).
8) ಅಭ್ಯರ್ಥಿ ವಿಕಲಚೇತನರಿದ್ದಲ್ಲಿ, ವಿಕಲಚೇತನ ಪ್ರಮಾಣ ಪತ್ರದ ಪ್ರತಿ. (in PDF format).

**ಆಯ್ಕೆ ಪ್ರಕ್ರಿಯೆ :**

ನಿಗದಿಪಡಿಸಿರುವ ಗುರಿಗಿಂತ ಅಧಿಕ ಅರ್ಹ ಅರ್ಜಿಗಳು ಸ್ವೀಕೃತವಾದಲ್ಲಿ, ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿಯಿಂದ ಲಾಟರಿ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರು, ಗ್ರಾಮೀಣ ಕೈಗಾರಿಕೆ, ಜಿಲ್ಲಾ ಪಂಚಾಯತ್, ನೌಬಾದ, ಬೀದರ ಇವರನ್ನು ಅಥವಾ ಆಯಾ ತಾಲೂಕಿನ ಕೈಗಾರಿಕಾ ವಿಸ್ತರಣಾಧಿಕಾರಿಗಳನ್ನು ಸಂಪರ್ಕಿಸಬಹುದು.

ಉಪನಿರ್ದೇಶಕರು (ಗ್ರಾಕೈ)
ಜಿಲ್ಲಾ ಪಂಚಾಯತ ಬೀದರ